38

# ದೇವರ ವಿಭಾಗಿಸುವ ಸಾಲು

## (13:42-14:7)

ಸುವಾರ್ತೆಯ ಒಂದು ವಿಶೇಷತೆಯೆನೆಂದರೆ ಅದು *ಒಗ್ಗೂಡಿಸುತ್ತದೆ* ಮತ್ತು *ವಿಭಾಗಿಸುತ್ತದೆ.* ಯೇಸು ಕ್ರಿಸ್ತನ ಸುವಾರ್ತೆಯು ಒಂದು ಒಗ್ಗೂಡಿಸುವಂತಹ ಶಕ್ತಿಯಾಗಿದೆಯೆಂದು ಲೋಕವು ಗ್ರಹಿಸಿರುವಂತಹ ಸಂಗತಿಯಾಗಿದೆ. ಅಪೊಸ್ತಲರ ಕೃತ್ಯದಲ್ಲಿನ ನಮ್ಮ ಅಧ್ಯಯನದಲ್ಲಿ ಪಾಲಿಸ್ತೇನಿನ ಯೆಹೂದ್ಯರ ಕುರಿತಾಗಿಯೂ ಯೆಹೂದ್ಯ ಮತಾವಲಂಭಿಗಳನ್ನು ಸಭೆಯಲ್ಲಿರುವ ಯೆಹೂದ್ಯರು ಮತ್ತು ಸಮಾರ್ಯರು ಹಾಗೂ ಯೆಹೂದ್ಯರು ಮತ್ತು ಅನ್ಯರು ಇವರೆಲ್ಲರ ಒಗ್ಗೂಡಿಸುವಿಕೆಯ ಕುರಿತಾಗಿ ನೋಡಿದ್ದೇವೆ. ಪ್ರಪಂಚದ ವಿವಿಧ ಭಾಗದ ಜನರು, ವಿವಿಧ ಜೀವನ ಶೈಲಿಯನ್ನು ಹೊಂದಿದವರು, ವಿವಿಧ ವರ್ಣದ - ಚರ್ಮದವರೆಲ್ಲರೂ, ಯೇಸುವಿನಲ್ಲಿ ಒಂದಾಗಿರುವದನ್ನು ನೋಡಿದ್ದೇವೆ.

ಇನ್ನೊಂದು ವಿಧದಲ್ಲಿ, ಸುವಾರ್ತೆಯು ವಿಭಾಗಿಸುವಂತದ್ದಾಗಿರುತ್ತದೆ. ಯೇಸು ತನ್ನ ಶಿಷ್ಯರಿಗೆ ಶಿಷ್ಯತ್ವದ ಅರ್ಥವನ್ನು ತಿಳಿಸುವಾಗ, ಹೇಳಿದ್ದೇನೆಂದರೆ:

> ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು. ಹೇಗಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಭೇದ ಹುಟ್ಟಿಸುವದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾ ಗುವರು (ಮತ್ತಾಯ 10:34-36).

ಈ ಪಾಠದಲ್ಲಿ, ಪೌಲ ಬಾರ್ನಬರು ಇಕೋನ್ಯವನ್ನು ಸಂಧಿಸಿದಾಗ, "ಆಗ ಆ ಊರಿನ ಜನರಲ್ಲಿ *ಭೇದವುಂಟಾಯಿತು;* ಕೆಲವರು ಯೆಹೂದ್ಯರ ಪಕ್ಷದವರಾದರು, ಕೆಲವರು ಅಪೊಸ್ತಲರ ಪಕ್ಷದವರಾದರು" (14:4; ಒತ್ತಿ ಹೇಳಿದ್ದು ನನ್ನದು). ಕೆಲವರು ಅಂಗೀಕರಿಸುವದರಿಂದಲೂ, ಮತ್ತು ಕೆಲವರು ನಿರಾಕರಿಸುವದರಿಂದಲೂ, ಸುವಾರ್ತೆಯು *ವಿಭಾಗಿಸುತ್ತದೆ* ಎಂದು ಗಮನಿಸುತ್ತೇವೆ.

ನಾವು ಪೌಲನ ಸೇವಾ ಪ್ರಯಾಣದ ಪ್ರಥಮ ಭಾಗದಲ್ಲಿನ ಮಧ್ಯದಲ್ಲಿರುರುವೆವು. ಅವರು ಕುಪ್ರ ದ್ವೀಪದಲ್ಲಿ ಸಾರಿದ ನಂತರ, ಪೌಲ ಬಾರ್ನಬರು ಆಸ್ಯ ಸೀಮೆಯ ಉತ್ತರಕ್ಕೆ ಪ್ರಯಾಣಮಾಡಿ ಪಿಸಿದ್ಯದ ಅಂತಿಯೋಕ್ಯಕ್ಕೆ ಬಂದರು. ಪೌಲನು ಅಂತಿಯೋಕ್ಯದ ಸಭಾ ಮಂದಿರದಲ್ಲಿ ಮಾಡಿದ ಪ್ರಸಂಗದ ಕುರಿತು, ಹಿಂದಿನ ಪಾಠದಲ್ಲಿ ಅಭ್ಯಾಸ ಮಾಡಿದ್ದೇವೆ. ಇಲ್ಲಿ ಅವನು ಪ್ರಸಂಗ ಮಾಡಿದಾಗ, ಅವನ ಇಕೋನ್ಯದ ಕೇಳುಗರಿಂದ ಉಂಟಾದ ಪ್ರತಿಕ್ರಿಯೆಯನ್ನು ನೋಡುತ್ತೇವೆ. ನಾವು ಈ ಅಧ್ಯಯನವನ್ನು "ದೇವರ ವಿಭಾಗಿಸುವ ಸಾಲು" ಎಂದು ಕರೆಯುತ್ತೇವೆ. "ನಾನು ಸಾಲಿನ ಯಾವ ಬದಿಯಲ್ಲಿದ್ದೇನೆ ಎಂಬ ಪ್ರಶ್ನೆಯನ್ನು ನಾವು ಪ್ರತಿಯೊಬ್ಬರೂ ಕೇಳಿಕೊಳ್ಳಬೇಕು?"

### ಅಂತಿಯೋಕ್ಯದಲ್ಲಿನ ವಿಭಾಗಿಸುವ ಸಾಲು (13:42-52)

**ನಿರ್ಧಾರ (ವಚನಗಳು 42, 43)**

ಪೌಲನು ಪ್ರಸಂಗದ ನಂತರ ಅಂತಿಯೋಕ್ಯದ ಸಭಾಮಂದಿರದಲ್ಲಿ ಉಂಟಾದ

ಪ್ರತಿಕ್ರಿಯೆಯನ್ನು ಪೌಲನು ಅಪೇಕ್ಷಿಸಿದ್ದನು. ಸಭೆಯು ಅಂತ್ಯಗೊಳ್ಳುವಾಗ "ಜನರು ಈ ಮಾತುಗಳನ್ನು ಬರುವ ಸಬ್ಬತ್ ದಿನದಲ್ಲಿಯೂ ತಮಗೆ ಹೇಳಬೇಕೆಂದು ಕೇಳಿ ಕೊಂಡರು"[1] (ವಚನ 42). ನಾನು ಸಹ ಪ್ರಸಂಗಿಯಾಗಿರುವದರಿಂದ ಇದನ್ನು ಹೇಳುತ್ತಿದ್ದೇನೆ: ಮುಂದಿನ ಸಬ್ಬತ್ ಪ್ರಸಂಗವನ್ನು ಮಾಡಿರಿ ಎಂದು ಜನರು ಮನವಿ ಮಾಡಿಕೊಳ್ಳುವಂಥದ್ದು ವಿರಳ! "ದಯಮಾಡಿ ಬರುವ ಸಬ್ಬತ್ ದಿನದಲ್ಲಿಯೂ ಆ ಸಂದೇಶವನ್ನು ಹೇಳಿರಿ"! "ಸಭಾ ಮಂದಿರದ ಕೂಟವು ಅಂತ್ಯಗೊಳ್ಳುವಾಗ,[2] ಯೆಹೂದ್ಯರಲ್ಲಿಯೂ ದೈವ ಭಕ್ತರಾಗಿದ್ದ ಯೆಹೂದ್ಯ ಮತಾವಲಂಭಿಗಳಲ್ಲಿಯೂ ಅನೇಕರು ಪೌಲ ಬಾರ್ನಬರನ್ನು ಹಿಂಬಾಲಿಸಿದರು. ಇವರು ಅವರ ಸಂಗಡ ಮಾತಾಡಿ ದೇವರ ಕೃಪಾಶ್ರಯದಲ್ಲಿ ನೆಲೆಗೊಂಡಿರಬೇಕೆಂದು ಪ್ರೋತ್ಸಾಹಪಡಿಸಿದರು" (ವಚನ 43). ಅವರು ನಂಬಿದರು ಎಂಬುದಕ್ಕೆ ನಮಗೆ ಸಾಕ್ಷಿ ಇರುವದಿಲ್ಲ.[3] ಆದ್ದರಿಂದ ಕೃಪಾಶ್ರಯದಲ್ಲಿ ನೆಲೆಗೊಂಡಿರಬೇಕು ಎಂಬುದು, "ದೇವರ ಕೃಪೆಯನ್ನು ಆಶ್ರಯಿಸಿ, ನಂಬಿಕೆಯಲ್ಲಿ ಮುಂದುವರಿಯಿರಿ" ಎಂಬ ತಾತ್ಪರ್ಯವಲ್ಲ. ಅಧ್ಯಾಯ 14ರಲ್ಲಿ ಪೌಲನು ಮಾಡಿದ ಪ್ರಸಂಗವನ್ನು "ಕೃಪಾ *ವಾಕ್ಯ*" ಎಂದು ಕರೆಯಲಾಗಿದೆ (14:3; ಒತ್ತಿ ಹೇಳಿದ್ದು ನನ್ನದು). ದೇವರ ಕೃಪಾ ಸಂದೇಶಕ್ಕೆ ಒಳಗಾಗಿರಿ ಎಂದು ಪೌಲ ಬಾರ್ನಬರು ಜನರಿಗೆ ಮನವಿ ಮಾಡಿಕೊಂಡರು.

ಪೌಲ ಬಾರ್ನಬರು ವಾರವಿಡೀ ಪ್ರಸಂಗಿಸುತ್ತಾ ಹಾಗೂ ಬೋಧಿಸುತ್ತಾ ಸಮಯವನ್ನು ಕಳೆದಿದ್ದರು, ಪೌಲನ ಮಾತನ್ನು ಕೇಳಿದವರೆಲ್ಲರೂ, ಮುಂದಿನ ಸಭಾಮಂದಿರದ ಸಬ್ಬತ್ ದಿನಕ್ಕೆ ಇತರರನ್ನು ಆಹ್ವಾನಿಸಿದ್ದರು ಎಂಬ ಭರವಸೆ ನನಗುಂಟು. ಅದರ ಪರಿಣಾಮವಾಗಿ, "ಮುಂದಿನ ಸಬ್ಬತ್ ದಿನದಲ್ಲಿ ಸ್ವಲ್ಪ ಕಡಿಮೆ ಊರೆಲ್ಲಾ ದೇವರ ವಾಕ್ಯವನ್ನು ಕೇಳುವದಕ್ಕೆ ಕೂಡಿ ಬಂತು" (ವಚನ 44). ಊರಿನವರೆಲ್ಲಾ ಒಟ್ಟುಗೂಡಿ, ಸುವಾರ್ತೆಯನ್ನು ಅಂಗಿಕರಿಸುವ ಅಥವಾ ನಿರಾಕರಿಸುವ, ದೇವರ ವಿಭಾಗಿಸುವ ಸಾಲಿನಲ್ಲಿ ಬಂದು ನಿಂತರು!

### ಭೇಧ (ವಚನಗಳು 45-49)

ತಕ್ಷಣವೇ ಬೇಧವುಂಟಾಯಿತು. ಪ್ರಾಥಮಿಕವಾಗಿ, ಯೆಹೂದ್ಯರ ಮತ್ತು ಅನ್ಯರ ನಡುವೆ ಬೇಧವುಂಟಾಗಿತು; ವಚನ 48ರಲ್ಲಿ ಉಂಟಾದ ಅನ್ಯರ ಬೇಧಕ್ಕೆ, ವಚನ 45ರಲ್ಲಿ ಉಂಟಾದ ಯೆಹೂದ್ಯರ ಪ್ರತಿಕ್ರಿಯೆಯನ್ನು ನೋಡುತ್ತೇವೆ. ಆಗಾಗ್ಗೆ ಯೆಹೂದ್ಯರು ಸ್ಪಂದಿಸುತ್ತಿದ್ದರೂ, ಅನ್ಯರೆಲ್ಲರೂ ಪೌಲನ ಸಾರಿದ ಸುವಾರ್ತೆಗೆ ಸ್ಪಂಧಿಸಲಿಲ್ಲ (14:1; ಇದನ್ನು ನೋಡಿರಿ 17:11), ಆದರೆ ನಿಯಮದ ಪ್ರಕಾರ ಯೆಹೂದ್ಯರು ತಿರಸ್ಕರಿಸಿದರು, ಅನ್ಯರು ಅಂಗೀಕರಿಸಿದರು.

ನಿರಾಕರಣೆ ಮಾಡಿದವರ ಕೆಲವು ಗುಣಗಳನ್ನು ನೋಡೋಣ; "ಜನರು ಗುಂಪಾಗಿ ಬರುವದನ್ನು ಯೆಹೂದ್ಯರು *ನೋಡಿ ಎದುರ್ಚಂಡಿಸುತ್ತಾ ದೂಷಣೆ ಮಾಡುತ್ತಾ ಇದ್ದರು*" (45ಎ; ಒತ್ತಿ ಹೇಳಿದ್ದು ನನ್ನದು). ಯೆಹೂದ್ಯರು ಸುವಾರ್ತಾ ಮನೋಭಾವವನ್ನು ಹೊಂದಿದವ ರಾಗಿದ್ದರೂ (ಮತ್ತಾಯ 23:15), ಮೋಶೆಯ ಧರ್ಮಶಾಸ್ತ್ರವನ್ನು ಕೇಳಿಸಲು, ಊರಿನವರೆಲ್ಲರನ್ನು ಒಂದೂಗೂಡಿಸಲು ಅವರಿಂದ ಸಾಧ್ಯವಾಗಲಿಲ್ಲ. ಸ್ವಲ್ಪ ಕಡಿಮೆ ಊರಿನವರೆಲ್ಲರೂ ಪೌಲ ಬಾರ್ನಬರ ಮಾತುಗಳನ್ನು ಕೇಳಲು ಸೇರಬರುವದನ್ನು ಯೆಹೂದ್ಯರು ನೋಡಿ ಅಸೂಯೆ ಪಟ್ಟರು,[4] ಅವರು ದೇವರ ವಾಕ್ಯವನ್ನು ವಿರೋಧಿಸಿದರು. ಪೌಲ ಬಾರ್ನಬರು ಮಾತನಾಡಲು, ಅವರು ಸ್ವಲ್ಪ ಕಾಲ ಅಡ್ಡಿ ಮಾಡಲಿಲ್ಲ;[5] ನಂತರ ಅವರು, ಅವರ ಮಾತುಗಳಿಗೆ "ಎದುರ್ಚಂಡಿಸುತ್ತಾ ದೂಷಣೆ ಮಾಡುತ್ತಾ ಇದ್ದರು" (13:45ಬಿ). ಬಹುಶಃ ಯೇಸುವನ್ನೆ ದೂಷಸಿರಬಹುದು. ಮೂಲ ಭಾಷೆಯಲ್ಲಿ, ಅವರು ಕೆಲವು ಕಾಲ ಪ್ರಸಂಗಿಗಳನ್ನೇ ಎದುರ್ಚಂಡಿಸುತ್ತಾ ಇದ್ದರು ಎಂದು ಬರೆದದೆ.

ಪೌಲ ಮತ್ತು ಬಾರ್ನಬರು ತಮ್ಮ ಪ್ರಸಂಗವನ್ನು ಪೂರ್ಣಮಾಡಲು ಸಾಧ್ಯವಾಗಲಿಲ್ಲ.

"ಆಗ ಅವರು, ಧೈರ್ಯದಿಂದ ಮಾತಾಡಿ - ದೇವರ ವಾಕ್ಯವನ್ನು ಮೊದಲು ನಿಮಗೆ ಹೇಳುವದು ಅವಶ್ಯವಾಗಿತ್ತು" (ವಚನ 46ಎ). ದೇವರ ಮಹತ್ವದ ಯೋಜನೆಯಲ್ಲಿ ಸುವಾರ್ತೆಯನ್ನು ಮೊದಲು "ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಸಾರೋಣವಾಗ ಬೇಕಿತ್ತು" (ರೋಮಾಪುರ 1:16). ಸುವಾರ್ತೆಯನ್ನು ಕೇಳುವದಕ್ಕೆ ಯೆಹೂದ್ಯರಿಗೆ ಮೊದಲ ಅವಕಾಶವನ್ನು ನೀಡಲಾಗಿತ್ತು: ಇತಿಹಾಸದಲ್ಲಿ ಅವರು ದೇವರ ಮೆಚ್ಚುಗೆಯ ಜನಾಂಗವಾಗಿದ್ದರು; ಕ್ರಿಸ್ತನ ಬರೋಣಕ್ಕಾಗಿ ದೇವರು ಅವರನ್ನು ಸಿದ್ಧ ಪಡಿಸುತ್ತಿದ್ದನು, ಈ ಕಾರಣದಿಂದ ಅವರು ಸುವಾರ್ತೆ ಯನ್ನು ಆತುರದಿಂದ ಅಂಗೀಕರಿಸಬೇಕಿತ್ತು.[6] ವಚನ 47ರಲ್ಲಿ ಇನ್ನೊಂದು ಕಾರಣವನ್ನು ನೀಡಲಾಗಿದೆ. "ಹಾಗೆಯೇ ಕರ್ತನು ನಮಗೆ ಅಪ್ಪಣೆ ಕೊಟ್ಟಿದ್ದಾನೆ; ಹೇಗೆಂದರೆ ನೀನು ಲೋಕದ ಕಟ್ಟಕಡೆಯವರೆಗೆ ರಕ್ಷಕನಾಗಿರುವಂತೆ ನಿನ್ನನ್ನು ಅನ್ಯಜನಾಂಗಗಳಿಗೂ ಬೆಳಕನ್ನಾಗಿ ನೇಮಿಸಿದ್ದೇನೆ." ನಮಗೆ ಎಂಬ ಪದದಲ್ಲಿ ಪೌಲ ಬಾರ್ನಬರು ಸಹ ಸೇರ್ಪಡೆಯಾಗಿರುವರು,[7] ಆದರೆ ನಾವು ಹಳೇ ಒಡಂಬಡಿಕೆಯ ವಾಕ್ಯವನ್ನು ಗಮನಿಸುವಾಗ (ಯೆಶಾಯ 49:6), ದೇವರು ಯೆಹೂದ್ಯ ಜನಾಂಗದೊಂದಿಂಗೆ ಮಾತನಾಡುತ್ತಿರುವನು. ಅವರು ಮೊದಲು ಕೇಳಿ, ನಂತರ ಅನ್ಯರಿಗೂ ತಿಳಿಸಬೇಕೆಂಬ ಕಾರಣದಿಂದ, ಅವರೇ ಮೊದಲು ಕೇಳುವಂಥ ಅವಕಾಶವನ್ನು ಅವರಿಗೆ ನೀಡಲಾಯಿತು. ದೇವರು ಅವರಿಗೆ ಅನುಗ್ರಹಿಸಿದಂಥ ಸುವಾರ್ತೆಯನ್ನು ಯೆಹೂದ್ಯ ಜನಾಂಗವು ನಿರಾಕರಿಸಿದ್ದರಿಂದ, ಕರ್ತನ ಮನಸ್ಸಿಗೆ ಎಷ್ಟು ಬೇಸರವುಂಟಾಗಿರಬಹುದು![8]

ಪೌಲ ಬಾರ್ನಬರು ಯೆಹೂದ್ಯರಿಗೆ ದುಃಖದಿಂದ ಹೇಳಿದ್ದೇನೆಂದರೆ, "ಆದರೆ ನೀವು ಅದನ್ನು ತಳ್ಳಿಬಿಟ್ಟು[9] ನಿಮ್ಮನ್ನು ನಿತ್ಯಜೀವಕ್ಕೆ ಅಪಾತ್ರರೆಂದು ಮಾಡಿಕೊಂಡಿದ್ದರಿಂದ, *ನಾವು ನಿಮ್ಮನ್ನು ಬಿಟ್ಟು ಅನ್ಯಜನರ ಕಡೆಗೆ ಹೋಗುತ್ತೇವೆ*" (ವಚನ 46ಬಿ; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿದ ವಿಷಯವು ಯೆಹೂದ್ಯರ ಕೆನ್ನೆಗೆ ಹೊಡೆದಂತೆ, ಅವರಿಗೆ ಅನುಭವವಾಯಿತು.

"ನಿಮ್ಮನ್ನು ನಿತ್ಯಜೀವಕ್ಕೆ ಅಪಾತ್ರರನ್ನಾಗಿ ಮಾಡಿಕೊಂಡಿರಿ" ಎಂಬ ವ್ಯಾಖ್ಯಾನವನ್ನು ಗಮನಿಸಿರಿ. ಮುಂದಿನ ವಚನದಲ್ಲಿ "ನಿತ್ಯ ಜೀವಕ್ಕೆ ನೇಮಿಸಲ್ಪಟ್ಟವರೆಲ್ಲರೂ ನಂಬಿದರು ಎಂದು ನೋಡುತ್ತೇನೆ" (ವಚನ 48). ಮನುಷ್ಯರ ಯಾವುದೇ ಪ್ರತಿಕ್ರಿಯೆ ಇಲ್ಲದೆ, ಅಥವಾ ಅದರ ಕೊರತೆ ಇರುವುದಾದರೂ ಸಹ, *ದೇವರು* ತಾನೇ ರಕ್ಷಣೆಹೊಂದುವವರು ಯಾರು ಎಂದು ನಿರ್ಧರಿಸುವನು ಎಂಬ ತರ್ಕವನ್ನು ಕೆಲವರು ಮಾಡುತ್ತಾರೆ. ಅಂತಿಯೋಕ್ಯದ ಯೆಹೂದ್ಯರು ನಿತ್ಯಜೀವಕ್ಕೆ ಅಪಾತ್ರರು ಎಂದು ದೇವರು ನಿರ್ಧರಿಸಲಿಲ್ಲ; ಅವರು ತಮಗೆ ತಾವೇ ನಿರ್ಧರಿಸಿಕೊಂಡರು!

"ಇಗೋ ನಾವು ನಿಮ್ಮನ್ನು ಬಿಟ್ಟು ಅನ್ಯಜನರ ಬಳಿಗೆ ಹೋಗುತ್ತೇವೆ" ಎಂಬ ಹೇಳಿಕೆಯಿಂದ, ಪೌಲ ಬಾರ್ನಬರು ಯೆಹೂದ್ಯರನ್ನು ತಮ್ಮ ಪಟ್ಟಿಯಿಂದ ತೆಗೆದುಹಾಕುತ್ತಿರುವದಿಲ್ಲ. ಮುಂದಿನ ಪಟ್ಟಣದಲ್ಲಿಯೂ, ಪೌಲ ಬಾರ್ನಬರು ಅದೇ ಪ್ರಕಾರವಾಗಿ ಯೆಹೂದ್ಯರ ಸಭಾ ಮಂದಿರದಲ್ಲಿ ಹೋಗಿ ಪ್ರಸಂಗಿಸಿದರು (14:1). ಅಂತಿಯೋಕ್ಯದ ಯೆಹೂದ್ಯರ ಸಭಾ ಮಂದಿರಕ್ಕೆ ಪ್ರಸಂಗಿಗಳು ಇನ್ನು ಮುಂದೆ ಹೋಗುವದಿಲ್ಲ ಎಂಬ ನಿರ್ಧಾರ ಮಾಡಿದ್ದರು. ಮತ್ತು, ಹೆಚ್ಚು ಪ್ರತಿಕ್ರಿಯೆ ಇರುವ ಅನ್ಯರ ಮಧ್ಯದಲ್ಲಿ ಪ್ರಸಂಗಿಸಿದ್ದರು. "ಯೆಹೂದ್ಯರು, ಅನ್ಯರನ್ನು ಸುಡಲು ಯೋಗ್ಯವಾದ ಕಸವೆಂದು ಪರಿಗಣಿಸಿದರು. ಯೇಸು, ಅವರನ್ನು, ದೇವರಿಗಾಗಿ ಇರುವ ಸುಗ್ಗಿ ಎಂದು ಪರಿಗಣಿಸಿದನು."[10]

ಈಗ ನಾವು ಅಂಗೀಕರಿಸಲು ಯೋಗ್ಯರಾದವರ ಕೆಲವು ಸದ್ಗುಣಗಳನ್ನು ಗಮನಿಸೋಣ: "ಅಲ್ಲಿದ್ದ ಅನ್ಯ ಜನರು ಆ ಮಾತನ್ನು ಕೇಳಿ ಸಂತೋಷಪಟ್ಟು ದೇವರ ವಾಕ್ಯವನ್ನು ಹೊಗಳಿದರು; ಮತ್ತು ನಿತ್ಯಜೀವಕ್ಕೆ ನೇಮಿಸಲ್ಪಟ್ಟವರೆಲ್ಲರೂ ನಂಬಿದರು" (13:48). ಯೆಹೂದ್ಯರು ಅಸೂಯೆಪಟ್ಟರು, ಅನ್ಯರು ಸಂತೋಷಪಟ್ಟರು. ಯೆಹೂದ್ಯರು ವಾಕ್ಯವನ್ನು ವಿರೋಧಿಸಿದರು, ಅನ್ಯರು ವಾಕ್ಯವನ್ನು ಹೊಗಳಿದರು, ಸಹಜವಾಗಿ ಯೆಹೂದ್ಯರು ನಂಬಲಿಲ್ಲ

(ನೋಡಿರಿ 14:2), ಆದರೆ ಅನ್ಯರು ನಂಬಿದರು, ಯೆಹೂದ್ಯರು ಅಪಾತ್ರರೆಂದು ತಿಳುಕೊಂಡರು, ಅನ್ಯರು "ನಿತ್ಯಜೀವಕ್ಕೆ ನೇಮಿಸಲ್ಪಟ್ಟವರಾಗಿದ್ದರು." ಗ್ರೀಕ್‌ನ "ನೇಮಕ" ಎಂಬ ಪದವನ್ನು "ನಿರಾಕರಿಸಲ್ಪಟ್ಟವರು" ಎಂದು ಅನುವಾದಿಸಲಾಗಿದೆ.[11] ಲಿವಿಂಗ್ ಬೈಬಲಿನಲ್ಲಿ "ಯಾರ್‍ಯಾರು ನಿತ್ಯ ಜೀವವನ್ನು ಬಯಸಿದರೋ, ಅಂತವರು ನಂಬಿದರು" ಯೆಹೋದ್ಯರು ಆತ್ಮೀಕ ಮರಣಕ್ಕೆ ತಳ್ಳಲ್ಪಟ್ಟರು, ಅನ್ಯರು ಆತ್ಮೀಕ ಜೀವಿತಕ್ಕೆ ತಳ್ಳಲ್ಪಟ್ಟರು!

ಪೌಲ ಬಾರ್ನಬರ ಪ್ರಯತ್ನಗಳು ಫಲಕಾರಿಯಾಗಿದ್ದವು! ಸಭೆಯು ದೃಢವಾಗಿ ಸ್ಥಾಪನೆಗೊಂಡಿತು (14:21-23), "ಕರ್ತನ ವಾಕ್ಯವು ಆ ಸೀಮೆಯ ಎಲ್ಲಾ ಕಡೆಗಳಲ್ಲಿ ಹಬ್ಬುತ್ತಾ ಬಂತು" (13:49).

**ಅಪಾಯ (ವಚನಗಳು 50-52)**

ವಾಕ್ಯವನ್ನು ನಿರಾಕರಿಸಿದ ಯೆಹೂದ್ಯರು ದೇವ ಸೇವಕರನ್ನು ನಿಂದಿಸುವ ಮೂಲಕ ಅವರ ಬಾಯನ್ನು ಮುಚ್ಚಿಬಿಟ್ಟರು; ಈಗ ಅವರ ಮೇಲೆ ನಿಯಮಾನುಸಾರ ಆರೋಪವನ್ನು ಮಾಡಿದರು. "ಆದರೆ ಯೆಹೂದ್ಯರು ತಮ್ಮ ಮತಕ್ಕೆ ಸೇರಿದ್ದ ಕುಲೀನ ಸ್ತ್ರೀಯರನ್ನು ಊರಿನ ಪ್ರಮುಖರನ್ನು ಪ್ರೇರಿಸಿದರು" (ವಚನ 50ಎ). [ರೋಮಾಯರ] ಕುಲೀನ ಸ್ತ್ರೀಯರಿಗೆ ಇದು ಸಾಧಾರಣವಾದ ಸಂಗತಿಯಾಗಿತ್ತು, ಯೆಹೂದ್ಯರ ಸಭಾಮಂದಿರದಲ್ಲಿ ಸೇರಿ ಬರುವದು ಆ ಸ್ತ್ರೀಯರಿಗೆ ಸಾಮಾನ್ಯ ಸಂಗತಿಯಾಗಿತ್ತು, ರೋಮಾಯರ ನೈತಿಕ ಮಟ್ಟವು ಕ್ಷೀಣಿಸುತ್ತಿದ್ದರಿಂದ, ಯೆಹೂದ್ಯರು ತಮ್ಮ ಸಭಾಮಂದಿರದಲ್ಲಿ ಸುಳ್ಳಿನಿಂದ ಪ್ರೇರಿಸಿ (ಊರಿನ ಪ್ರಮುಖರಾದ).[12] ಅವರ ಗಂಡಂದಿರನ್ನು ಪ್ರೇರಿ ಸುತ್ತಿದ್ದರು. ಒಂದು ವೇಳೆ ಯೆಹೂದ್ಯರು ಅವರ ಅಧಿಕಾರಿಗಳಿಗೆ ಕ್ರೈಸ್ತರ ಕುರಿತು; ಅವರ ಧರ್ಮವು ಅಪದ್ಧವಾಗಿರುವದರಿಂದ ಅವರು ಬೆಳೆಯದಂತೆ ತಡೆಗಟ್ಟಬೇಕು ಎಂದು ತಿಳಿಸಿರಬಹುದು[13] ಹೇಗೂ ಯೆಹೂದ್ಯರು ಊರಿನ ಪ್ರಮುಖರನ್ನು ಸೇರಿಸಿಕೊಂಡು, "ಪೌಲ ಬಾರ್ನಬರ ಮೇಲೆ ಹಿಂಸೆಯನ್ನು ಎಬ್ಬಿಸಿ, ಅವರನ್ನು ತಮ್ಮ ಮೇರೆಯಿಂದ ಆಚಗೆ ಅಟ್ಟಿದರು" (ವಚನ 50ಬಿ). ಒಂದು ವೇಳೆ ಸಿಪಾಯಿಗಳು, ಪ್ರಸಂಗಿಗಳನ್ನು ಊರ ಬಾಗಿಲಿನವರೆಗೂ ಸಾಗಿಸಿರಬಹುದು.

ಪೌಲ ಬಾರ್ನಬರು ತಮ್ಮ ಪ್ರಯಾಣವನ್ನು ಪೂರ್ವಕ್ಕೆ ಮುಂದುವರೆಸುವದಕ್ಕಿಂತ ಮುಂಚೆ ಇನ್ನೊಂದು ಸಾರಿ, ಅವರು ಅಸಾಧಾರಣವಾದ ನಿಮ್ಮ ಸುವಾರ್ತಾ ಪ್ರಸಂಗವನ್ನು ನಿಲ್ಲಿಸಿರಿ ಎಂದರು: ವಚನ 51, "ಇವರು ತಮ್ಮ ಕಾಲಿಗೆ ಹತ್ತಿದ್ದ ಧೂಳನ್ನು ಅವರ ಮೇಲೆ ಜೋಡಿಸಿಬಿಟ್ಟರು." (ನೋಡಿರಿ ಮತ್ತಾಯ 10:14; ಮಾರ್ಕ 6:11; ಲೂಕ 9:5.) ಯೆಹೂದ್ಯರು ಅನ್ಯರನ್ನು ಅತಿಯಾಗಿ ದ್ವೇಷಿಸಿದ್ದರಿಂದ, ಯೆಹೂದ್ಯರು, ಅನ್ಯರ ಪ್ರದೇಶಗಳನ್ನು ಸಂಚರಿಸಿ ಹಿಂದಿರುಗುವಾಗ, ತಮ್ಮ ಕಾಲಿಗೆ ಹತ್ತಿದ ಧೂಳನ್ನು ಸಹ ಜೋಡಿಸಿಬಿಡುತ್ತಿದ್ದರು, ಅದನ್ನು ಅವರು "ಅನ್ಯರ ಧೂಳು" ಎಂದು ಕರೆಯುತ್ತಿದ್ದರು. ಪೌಲ ಬಾರ್ನಬರು ಮಾಡಿದ ಈ ಕಾರ್ಯದ ನಿಮತ್ತ, ಯೆಹೂದ್ಯರು ಸುವಾರ್ತೆಯನ್ನು ನಿರಾಕರಿಸಿದ್ದರಿಂದ, ದೇವರೇ ಯೆಹೂದ್ಯರನ್ನು "ಅನ್ಯರು" ಎಂದು ಪರಿಗಣಿಸಿರುವನು ಎಂಬ ಸಾರಾಂಶವನ್ನು ಯೆಹೂದ್ಯರಿಗೆ ತಿಳಿಸಿದರು!

ಅಂತಿಯೋಕ್ಯದ ಕ್ರೈಸ್ತರು, ತಮ್ಮ ನಾಯಕರಿಗೆ ಉಂಟಾದ ನಿರಾಕರಣೆಯ ಕುರಿತು ತೋರಿದ ಪ್ರತಿಕ್ರಿಯೆಯನ್ನು ವಚನ 52 ತಿಳಿಸುತ್ತದೆ, "ಶಿಷ್ಯರೆಲ್ಲರು ಭಯದಿಂದ ಮತ್ತು ಅನಿಶ್ಚಯತೆಯಿಂದ ತುಂಬಿದವರಾದರು," ಎಂದು ಅ ವಚನವು ತಿಳಿಸುತ್ತದೆ. ಎಂದು ನೀವು ಬಾವಿಸಿರಬಹುದು. ಅದರ ಬದಲಾಗಿ, "ಶಿಷ್ಯರಾದವರು ಸಂತೋಷ ಪೂರ್ಣರೂ ಪವಿತ್ರಾತ್ಮ ಭರಿತರು[14] ಆದರು" ಎಂದು ಆ ವಚನ ತಿಳಿಸುತ್ತದೆ. ಪೌಲ ಬಾರ್ನಬರು ಪಿಸಿದ್ಯದ ಅಂತಿಯೋಕ್ಯದಲ್ಲಿ ಬಲವುಳ್ಳ, ಮತ್ತು ಹೆದರದ ಸಭೆಯನ್ನು ಬಿಟ್ಟು ಬಂದಿದ್ದರು.

## ಇಕೊನ್ಯದಲ್ಲಿ ಉಂಟಾದ ವಿಭಾಗಿಸುವ ಸಾಲು (14:1-7)

ಒಂದು ಸ್ಥಳದಲ್ಲಿ ಪೌಲನು ಪ್ರಸಂಗಿಸಲು ಸಾಧ್ಯವಾಗದಿದ್ದಾಗ; ಅವನು ಪ್ರಸಂಗಿಸುವದನ್ನು ನಿಲ್ಲಿಸದೆ ಇನ್ನೊಂದು ಸ್ಥಳಕ್ಕೆ ಹೋಗುತ್ತಿದ್ದನು. ಪೌಲ ಬಾರ್ನಬರು ರೋಮಾಪುರ ರಸ್ತೆಯಲ್ಲಿ ತೊಂಬತ್ತು ಮೈಲುಗಳಷ್ಟು ಸಂಚಾರ ಮಾಡಿ, ದೊಡ್ಡದಾದ ಗುಡ್ಡಗಾಡುಗಳ ಭೂಮಿಯನ್ನು ಹಾದು, ಪೂರ್ವದಿಕ್ಕಿನಲ್ಲಿದ್ದ ಬೆಟ್ಟಗಳನ್ನು ದಾಟಿ, ಪ್ರಾಚೀನ ಪಟ್ಟಣವಾದ ಇಕೋನ್ಯಕ್ಕೆ ಬಂದು ಮುಟ್ಟಿದರು[15] (13:51ಬಿ). ಇಕೊನ್ಯವು ಒಂದು ಅಡ್ಡವಾದ ರಸ್ತೆಗಳು ಮತ್ತು ವ್ಯವಸಾಯದ ಮುಖ್ಯ ಕೇಂದ್ರವಾಗಿತ್ತು, ಆಸ್ಯ ಸೀಮೆಯ ಪ್ರಮುಖ ಹಾಗು ದೊಡ್ಡ ಪಟ್ಟಣವಾಗಿತ್ತು.

### ನಿರ್ಧಾರಗಳು (ವಚನಗಳು 1-3)

ಪೌಲ ಮತ್ತು ಬಾರ್ನಬರ ಸೇವಾ ಯೋಜನೆಯು, ಅಂತಿಯೋಕ್ಯದಲ್ಲಿಯೇ ನಿರ್ಧಾರವಾಗಿತ್ತು: "ಇಕೋನ್ಯದಲ್ಲಿ ಪೌಲ ಬಾರ್ನಬರು ಅದೇ ಪ್ರಕಾರವಾಗಿ ಯೆಹೂದ್ಯರ ಸಭಾ ಮಂದಿರದೊಳಗೆ ಹೋದರು" (14:1ಎ). ದೇವರು ಅವರ ಪ್ರಯತ್ನವನ್ನು ಆಶೀರ್ವದಿಸಿದನು: ಅವರು, "ಅಲ್ಲಿ ಬಲವಾಗಿ ಮಾತಾಡಿದ್ದರಿಂದ ಯೆಹೂದ್ಯರಲ್ಲಿಯೂ, ಗ್ರೀಕರಲ್ಲಿಯೂ ಬಹುಮಂದಿ ನಂಬುವವರಾದರು"[16] (ವಚನ 1ಬಿ). "ಬಹುಮಂದಿ" ಎಂದು ಹೇಳುವಾಗ ಆ ಗುಂಪಿನಲ್ಲಿ ಯೆಹೂದ್ಯರಿಗಿಂತಲೂ, ಅನ್ಯ ಜನರೇ ಹೆಚ್ಚಿನವರಾಗಿದ್ದರು.

ಪೌಲ ಬಾರ್ನಬರು, ಪೂರ್ವಕ್ಕೆ ಪ್ರಯಾಣವನ್ನು ಬೆಳೆಸುವ ಮೊದಲು, ಒಂದು ಅಪರೂಪದ ಕಾರ್ಯವನ್ನು ಮಾಡಿದ್ದರು: ಅವರು, ತಮ್ಮಕಾಲಿಗೆ ಹತ್ತಿದ್ದ ಧೂಳನ್ನು ಅವರ ಮೇಲೆ ಜೋಡಿಸಿಬಿಟ್ಟಿದ್ದರು ಆದರೆ ಯೆಹೂದ್ಯರು ಅನ್ಯಜನರ ಮನಸ್ಸನ್ನು ಸಹೋದರರಿಗೆ, ವಿರುದ್ಧವಾಗಿ, ರೇಗಿಸಿ ಕೆಡಿಸಿದರು [ಅವರ ಮನಸ್ಸಿನಲ್ಲಿ ವಿಷ ತುಂಬಿದರು; NIV] (ವಚನ 2). ಸತ್ಯವನ್ನು ಕೇಳಿ ನಂಬದಂತೆ ಸೈತಾನನು ಯಾವ ಸುಳ್ಳನ್ನಾದರೂ ಹೇಳುವನು.

"ನಂಬದೆ ಹೋದ" ಎಂಬ ಪದವನ್ನು ಕ್ಷಣಕಾಲ ಗಮನಿಸಿರಿ; "ನಂಬದೆ ಹೋದ" ಎಂಬ ಗ್ರೀಕ್ ಪದವು ಸುವಾರ್ತೆಯನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಕುರಿತ ಪಾಠವನ್ನು ತಿಳಿಸುತ್ತದೆ. ವಚನ 2ರ ನಂಬದೆ ಹೋದರು; ಎಂಬ ಪದವು "ನಂಬಿದರು" ಎಂಬುದಕ್ಕೆ ವಿರುದ್ಧ ಪದವಾಗಿದೆ, ಕೆಲವರು ನಂಬಿದಾಗ, ಇನ್ನೂ ಕೆಲವರು ನಂಬದೆ ಹೋದರು. ಹೇಗೂ, "ನಂಬದೆ ಹೋದರು" ಎಂಬ ಪದವು ವಚನ 1: "ನಂಬಿದರು" ಎಂಬ ಪದದ ನಕರಾತ್ಮಕವಾದ ತರ್ಜುಮೆಯಲ್ಲಿ ಅದರ ಬದಲಾಗಿ, ವಚನ 2ರ "ನಂಬದೆ ಹೋದರು" ಎಂಬ ಪದವನ್ನು (*apeitheo* ಎಂಬ ಮೂಲ ಪದದಿಂದ) ಅಕ್ಷರಶಃ "ಅವಿಧೇಯ"[17] ಎಂದಿದ್ದು ಮತ್ತು ಯೋಹಾನ 3:36ರ NASBಯಲ್ಲಿಯೂ ಇದೇ ಅರ್ಥವನ್ನು ನೀಡಲಾಗಿದೆ. ಅಪೊಸ್ತಲ ಕೃತ್ಯಗಳು 14:2ನ್ನು ASVಯಲ್ಲಿ: "ಅವಿಧೇಯರಾದ ಯೆಹೂದ್ಯರು ಅನ್ಯರ ಆತ್ಮಗಳನ್ನು *ಪ್ರಚೋದನೆ ಮಾಡಿದರು* ..." ಎಂಬ ತರ್ಜುಮೆಯನ್ನು ನೀಡಲಾಗಿದೆ. (ಒತ್ತಿ ಹೇಳಿದ್ದು ನನ್ನದು.) ದೇವರು, ವಿಭಾಗಿಸುವ ಸಾಲಿನಲ್ಲಿ, ಪ್ರಮುಖವಾದ ಇನ್ನೊಂದು ಅಂಶವಿದೆ. ಒಂದೆಡೆ ಅವಿಧೇಯರು; ಇನ್ನೊಂದೆಡೆ ವಿಧೇಯರು.

ನಮ್ಮ ಬೋಧನೆಗಳು, ವಿರೋಧಕ್ಕೆ ತುತ್ತಾಗುವಾಗ, ನಮ್ಮಲ್ಲಿ ಅನೇಕರು ಇನ್ನೊಂದು ಸ್ಥಳದಲ್ಲಿ ಪ್ರಯತ್ನಿಸುತ್ತೇವೆ. "ದೇವರಿಗೆ ಈ ಸ್ಥಳ ಸರಿಯಾದ ಸ್ಥಳವಾಗಿರದೇ ಇರಬಹುದೆಂದು ತಿಳಿದು ಅಳುತ್ತೇವೆ." ಹೇಗೂ, ಪೌಲ ಬಾರ್ನಬರಿಗೆ ಉಂಟಾದ ಬಹು ವಿರೋಧವು, ದೇವರು ಅವರಿಗಾಗಿ ಇನ್ನೊಂದು ಸ್ಥಳದಲ್ಲಿ ಆತ್ಮಗಳ ಸುಗ್ಗಿಯನ್ನುಂಟು ಮಾಡಿದನೆಂಬುದಕ್ಕೆ ಸೂಚನೆಯಾಗಿತ್ತು ಮತ್ತು ಅವರು ಎಡಬಿಡದೆ ಬಿತ್ತುವಾಗ, ಹೆಚ್ಚು ಬೆಳೆಯನ್ನು ಕೊಯ್ಯುವದಕ್ಕೆ ಸಾಧ್ಯವಾಗಿತ್ತು (ಗಮನಿಸಿ 1 ಕೊರಿಂಥ 16:9). "ಹೀಗಿರಲಾಗಿ ಪೌಲ ಬಾರ್ನಬರು ಬಹುಕಾಲ ಅಲ್ಲಿದ್ದು ಕರ್ತನು ಅವರ ಕೈಯಿಂದ ಸೂಚಕ ಕಾರ್ಯಗಳೂ, ಅದ್ಭುತ ಕಾರ್ಯಗಳೂ ಆಗುವಂತೆ ದಯಪಾಲಿಸಿ ತನ್ನ ಕೃಪಾ ವಾಕ್ಯಕ್ಕೆ ಸಾಕ್ಷಿಕೊಟ್ಟದ್ದರಿಂದ ಆತನ ಮೇಲೆ

ಭರವಸವಿಟ್ಟು ಧೈರ್ಯದಿಂದ ಮಾತಾಡುತ್ತಿದ್ದರು" (ವಚನ 3; ನೋಡಿರಿ ಇಬ್ರಿಯ 2:4).

**ವಿಭಾಗ (ವಚನ 4)**

ಸೈತಾನನು, ಸುವಾರ್ತೆಗೆ ಅಡ್ಡಿಪಡಿಸದೇ ಇರುವದಿಲ್ಲ. ಮತ್ತೊಂದು ಸಾರಿ ಯೆಹೂದ್ಯರು ಅವರಿಗೆ ವಿರೋಧವನ್ನು ವ್ಯಕ್ತಪಡಿಸಿದರು: "ಆಗ ಆ ಊರಿನ ಜನರಲ್ಲಿ ಭೇದವುಂಟಾಯಿತು; ಕೆಲವರು ಯೆಹೂದ್ಯರ ಪಕ್ಷದವರಾದರು; ಕೆಲವರು ಅಪೊಸ್ತಲರ ಪಕ್ಷದವರಾದರು" [ಅಥವಾ ಸೇವಕರ][20] (ವಚನ 4). ಕೆಲವರು ಸುವಾರ್ತೆಯನ್ನು ನಿರಾಕರಿಸಿದವರ ಹಿಂದೆ ಹೋದರು, ಮತ್ತು ಅವಿಧೇಯರ ಕಡೆಗೆ ತಿರುಗಿಕೊಂಡರು: ಇನ್ನೂ ಕೆಲವರು ಸುವಾರ್ತೆಯನ್ನು ಅಂಗೀ ಕರಿಸಿರಾದ: ನಂಬಿರುವವರ ಮತ್ತು ವಿಧೇಯರ ಕಡೆಗೆ ತಿರುಗಿಕೊಂಡರು.

**ಅಪಾಯ (ವಚನಗಳು 5-7)**

ಪುನಃ ನಂಬದೆ ಹೋದವರು ದೇವರ ಸುವಾರ್ತಿಕರನ್ನು ಮೌನಗೊಳಿಸಲು ಪ್ರಯತ್ನಿಸಿದರು: "ಅನ್ಯ ... ಜನರೂ ಯೆಹೂದ್ಯರೂ ಕೂಡಿ ತಮ್ಮ ಅಧಿಪತಿಗಳ ಸಮ್ಮತಿಯಿಂದ ಅಪೊಸ್ತಲರನ್ನು ಅವಮಾನಪಡಿಸುವದಕ್ಕೂ ಕಲ್ಲೆಸೆದು ಕೊಲ್ಲುವದಕ್ಕೂ ಪ್ರವರ್ತಿಸಿದರು" (ವಚನ 5). ಕಲ್ಲೆಸೆದು ಕೊಲ್ಲುವದು ಯೆಹೂದ್ಯರ ಪದ್ಧತಿಯಾಗಿತ್ತು, ಆದ್ದರಿಂದ ಸಭಾಮಂದಿರದ ಮೇಲ್ವಿಚಾರಕರನ್ನೇ "ಅಧಿಪತಿಗಳು" ಎಂದು ಕರೆದಿರಬಹುದು - ಅವರ ಈ ಕಾರ್ಯವನ್ನು ಗಮನಿಸು ವಾಗ, ಯೆಹೂದ್ಯರು ತಮ್ಮ ಪ್ರದೇಶದ ಅಧಿಕಾರಿಗಳಿಗೆ ಭಯಪಡಲಿಲ್ಲವೆಂಬ ಸೂಚನೆಯನ್ನು ಈ ಕಾರ್ಯವು ನೀಡುತ್ತದೆ. ಪೌಲ ಬಾರ್ನಬರು ಅಂತಿಯೋಕ್ಯದಿಂದ ಪ್ರಯಾಣಿಸುವಾಗ ರೋಮಾಯರ ಆಡಳಿತದಿಂದ - ಅಪಾಯಕ್ಕೂ, ದುರ್ಗಮವಾದ ಪ್ರದೇಶಕ್ಕೂ ಸೇರ್ಪಡೆಗೊಳ್ಳುತ್ತಿದ್ದರು.

ಈ ಹಿಂದೆ, ದೇವರ ಸಹಾಯದಿಂದ, ಪೌಲನು ಜನ ಸಮೂಹದ ಮನೋಭಾವದ ಉದ್ದೇಶವನ್ನು ಅರಿತವನಾಗಿದ್ದನು. ಪೌಲ ಬಾರ್ನಬರು ಅದನ್ನು ತಿಳಿದು ಓಡಿ ಹೋಗಿ ಲುಕ ವೋನ್ಯದಲ್ಲಿದ್ದ[21] ಲುಸ್ತ್ರ ಮತ್ತು ದರ್ಬೆಗೆ ಸೇರಿಕೊಂಡರು (ವಚನ 6ಎ; ಮತ್ತಾಯ 10:23 ನೋಡಿರಿ). ಅಗತ್ಯತೆಯಿರುವಾಗ ಅವರಿಬ್ಬರೂ ಹಿಂಸೆಯನ್ನು ಅನುಭವಿಸಲು ಸಿದ್ಧರಾಗಿದ್ದರು. ಆದರೆ ಮರಣಕ್ಕೆ ಒಳಪಡುವಂತ ಸಮಯವು ಒದಗಿಬಂದಾಗ ಅದನ್ನು ತಪ್ಪಿಸಿಕೊಂಡರು. ಅವರು ಇಕೋನ್ಯದಲ್ಲಿ ಬಲವಾದ ಕರ್ತನ ಸಭೆಯನ್ನು ಸ್ಥಾಪಿಸಿ (ವಚನಗಳು 21-23) - ಮತ್ತು ದಕ್ಷಿಣ ಭಾಗದಲ್ಲಿದ್ದ ಲುಸ್ತ್ರಕ್ಕೆ ಪ್ರಸಂಗ ಮಾಡಲು ಮುಂದಾದರು (ವಚನ 7).

## ಮುಕ್ತಾಯ

ಲುಸ್ತ್ರದಲ್ಲಿ ನಡೆದ ಘಟನೆಗಳನ್ನು ನಮ್ಮ ಮುಂದಿನ ಪಾಠದಲ್ಲಿ ಗಮನಿಸೋಣ. ಸದ್ಯಕ್ಕೆ, ದೇವರ ವಿಭಾಗಿಸುವ ಸಾಲಿನ ಕಡೆಗೆ ಇನ್ನೊಂದು ಸಾರಿ ದೃಷ್ಟಿಯನ್ನು ಹಾಯಿಸೋಣ. ಅಂತಿಯೋಕ್ಯದಲ್ಲಿಯೂ ಮತ್ತು ಇಕೋನ್ಯದಲ್ಲಿಯೂ, ಪೌಲನ ಕೇಳುಗರು ನಿಂತುಕೊಂಡಂತಹ ಸ್ಥಾನದಲ್ಲಿಯೇ, ನಾನು ಮತ್ತು ನೀವು ನಿಂತುಕೊಂಡಿದ್ದೇವೆ. ಸುವಾರ್ತೆಯನ್ನು ಕೇಳುವಾಗ, ಅದನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ನಾವು ಹೊಂದಿರುತ್ತೇವೆ; ಇದನ್ನು ಮಾಡುವಾಗ, ನಮ್ಮ ಕ್ರಿಯೆಗಳುಂಟು ಮಾಡುವ ಪರಿಣಾಮವನ್ನು ನಾವು ಅರಿತುಕೊಳ್ಳಬೇಕು. ಒಂದು ದಿವಸ ಕರ್ತನು ಹಿಂದಿರುಗುತ್ತಾನೆ, ಆಗ ಈ ಚಿತ್ರಣವು ಸತ್ಯವಾಗಿರುತ್ತದೆ:

> ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನೂ ಕುರಿಗಳನ್ನೂ ಬೇರೆಬೇರೆಮಾಡುವ ಪ್ರಕಾರ ಆತನು ಅವರನ್ನು ಬೇರೆ ಬೇರೆಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನು ಎಡಗಡೆಯಲ್ಲಿ ನಿಲ್ಲಿಸುವನು (ಮತ್ತಾಯ 25:32, 33).

ಇದು *ಅಂತಿಮವಾದ* ವಿಭಜನೆಯಾಗಿರುತ್ತದೆ - ಅದು ಬದಲಾಗದೆ ಇರುವಂಥದ್ದು ಮತ್ತು ಬದಲು ಮಾಡಲಾರದಂಥದ್ದು! ಈ ದಿನದ ನಮ್ಮ ನಿರ್ಧಾರವು ಆ ಮುಂದಿನ ದಿನದ ನಿರ್ಧಾರವನ್ನು ಅವಲಂಭಿಸಿರುತ್ತದೆ, ಸುವಾರ್ತೆಯನ್ನು ನಾವು ಈಗ ಅಂಗೀಕರಿಸಿದರೆ, ಮಾತ್ರ ಮುಂದೆ ದೇವರು ನಮ್ಮನ್ನು ಅಂಗೀಕರಿಸುತ್ತಾನೆ; ಸುವಾರ್ತೆಯನ್ನು ಒಂದು ವೇಳೆ ಈಗ ನಿರಾಕರಿಸಿದರೆ, ಆ ದಿನ ದೇವರು ಕೂಡ ನಮ್ಮನ್ನು ನಿರಾಕರಿಸುತ್ತಾನೆ!

## ದೃಷ್ಯ ಸಂಬಂಧವಾದ - ಟಿಪ್ಪಣಿ

"ದೇವರ ವಿಭಾಗಿಸುವ ಸಾಲಿನ" ಒಂದು ಚಿತ್ರವನ್ನು ಬಿಡಿಸಿ ಅಂತಿಯೋಕ್ಯ ಮತ್ತು ಇಕೋನ್ಯದ ಜನರು ವಿಭಜಿಸಲ್ಪಟ್ಟ ವಿಧವನ್ನು ವಿವರಿಸಬಹುದು. ಅದನ್ನು ಕಪ್ಪು ಹಲಗೆಯ ಮೇಲೆ ಬರೆದು ಕಾರ್ಡ್‌ಬೋರ್ಡಿನ ಸಹಾಯದಿಂದ ವಿವರಿಸಬಹುದು.

### ದೇವರ ವಿಭಾಗಿಸುವ ಸಾಲು

| ಅನೇಕ ಯೆಹೂದ್ಯರು | ಅನ್ಯರಾದ ಅನೇಕರು |
|---|---|
| ಅಸೂಯೆ | ಸಂತೋಷಗೊಂಡರು |
| ವಾಕ್ಯವನ್ನು ವಿರೋಧಿಸಿದರು | ವಾಕ್ಯದಲ್ಲಿ ಸಂತೋಷಿಸಿದರು |
| ಮರಣಕ್ಕೆ ತುತ್ತಾದರು | ನಿತ್ಯಜೀವಕ್ಕೆ ಪಾತ್ರರಾದರು |
| ನಂಬದೇ ಹೋದರು | ನಂಬಿದರು |
| ಅವಿಧೇಯರಾದರು | ವಿಧೇಯರಾದರು |
| *ದೇವರಿಂದ ನಿರಾಕರಿಸಲ್ಪಟ್ಟರು* | *ದೇವರಿಂದ ಅಂಗೀಕರಿಸಲ್ಪಟ್ಟರು* |

ಅಂತಿಯೋಕ್ಯ | ಇಕೋನ್ಯ

ಸುವಾರ್ತೆ

## ಪ್ರಸಂಗದ ಟಿಪ್ಪಣಿ

13:44-52ರನ್ನು ಸಿ. ಬ್ರೂಸ್‌ವೈಟ್‌ರವರು ಈ ಕೆಳಕಂಡಂತೆ ವಿಭಾಗಿಸಿದ್ದಾರೆ. (1) ವೈರಿಗಳು ಅಸೂಯೆಪಡುವರು (ವಚನಗಳು 45-47), (2) ಸತ್ಯವನ್ನು - ಅಪೇಕ್ಷಿ ಸುವವರು ಬೋಧಿಸಲ್ಪಡುವರು (ವಚನಗಳು 48-50), ಮತ್ತು (3) ದೇವರು ಮಹಿಮೆ ಹೊಂದುವನು (ವಚನಗಳು 51-52). 14:1-7ನ್ನು ಅವರು ಒಂದು ಪಾಠವನ್ನು ಅಭಿವೃದ್ಧಿಪಡಿಸಿ: (1) ಪ್ರತಿಕ್ರಿಯೆ ವ್ಯಕ್ತ ಪಡಿಸಿದ ಜನ ಸಮೂಹ (ವಚನ 1), (2) ದ್ವೇಷದ ಒಂದು ಪ್ರತಿಕ್ರಿಯೆ (ವಚನಗಳು 2-5), ಮತ್ತು (3) ಪುನಸ್ಥಾಪಿಸುವ ಒಂದು ಪಾತ್ರ (ವಚನಗಳು 6, 7).

---

ಟಿಪ್ಪಣಿಗಳು

[1]ಮುಂದಿನ ಸಬ್ಬತ್ ದಿನದಲ್ಲಿ ಮಾತನಾಡಲು ಪೌಲ ಬಾರ್ನಬರನ್ನು ಆಹ್ವಾನಿಸಬೇಕೆಂದು ಅವರು ಸಭಾಮಂದಿರದ ಅಧಿಕಾರಿಗಳಿಗೆ ಮನವಿ ಮಾಡಿರಬಹುದು. [2]"ಗೊಂದಲವಾಯಿತು" ಎಂಬ ಪದವು ಸಭಾಮಂದಿರದ ನಾಯಕರುಗಳು ಪೌಲನ ಸಂದೇಶವನ್ನು ಕೇಳಿ ಗೊಂದಲಕ್ಕೊಳಗಾಗಿ ಸಭೆಯನ್ನು ನಿಲ್ಲಿಸಿದ್ದರು ಮತ್ತು ಮುಂದಿನ ಸಬ್ಬತ್‌ನಲ್ಲಿ ಆಹ್ವಾನಿಸಿದರೆಂಬ ಸೂಚನೆಯನ್ನು ನೀಡುತ್ತಿರಬಹುದು. [3]ವಚನ 48ರವರೆಗೆ ನಂಬಿಕೆಯೆಂಬ ಪದವನ್ನು ಬಳಸಿರುವದಿಲ್ಲ. [4]ಯೆಹೂದ್ಯರು ಕೂತುಕೊಳ್ಳುವ

ಸ್ಥಳದಲ್ಲಿ ಅನ್ಯರು ಬಂದು ಕುಳಿತುಕೊಂಡಿರುವ ವಿಷಯವು ಯೆಹೂದಿಯರಿಗೆ ಬೇಸರವುಂಟುಮಾಡಿರಬಹುದು! [5]ಪೌಲ ಬಾರ್ನಬರಿಬ್ಬರೂ ಮಾತನಾಡಿ, ಪೌಲನು ಸಭಾಮಂದಿರದ ಒಳಗೂ ಬಾರ್ನಬನು ಹೊರಗೂ ಮಾತನಾಡುವಾಗ ಜನರು ಪ್ರವೇಶಿಸಿರಬಹುದು. [6]ಪೌಲನು ತನ್ನ ಜನರಾದ ಯೆಹೂದ್ಯರನ್ನು ಪ್ರೀತಿಸಿದ್ದರಿಂದ ಮೊದಲು ಅವರಿಗೆ ಸುವಾರ್ತೆಯನ್ನು ಸಾರಲು ಸಂತೋಷಗೊಂಡನು (ರೋಮಾಪುರ 9:1-5; 10:1-3). [7]ಪೌಲ ಬಾರ್ನಬರಿಗೆ ಆ ಮಾತುಗಳು ಸಂಬಂಧವಿದ್ದರೂ (26:16-18) ಅದು ಅವರಿಗಾಗಿಯೇ ಹೇಳಿರಲಿಲ್ಲ. ಈ ಮೂಲ ಪದಗಳನ್ನು ಯೇಸುವಿಗಾಗಿಯೂ ಬಳಸಲಾಗಿದೆ (ಲೂಕ 2:29-32). ದೇವರ ಉದ್ದೇಶವನ್ನು ಯೇಸು ನೆರವೇರಿಸಿರುವನು. ಈ ಹಿಂದೆ ಯೆಹೂದ್ಯರು ಅದನ್ನು ನೇರವೇರಿಸಿರಲಿಲ್ಲ. [8]ಕೆಲವು ಯೆಹೂದ್ಯರು (ಅಪೊಸ್ತಲರಂತಿದ್ದವರು). ಯೇಸುವನ್ನು ಅಂಗೀಕರಿಸಿದರು. ಆದರೆ ಯೆಹೂದ್ಯ ಜನಾಂಗವಾಗಿ ಆತನನ್ನು ನಿರಾಕರಿಸಿದರು (ಯೋಹಾನ 1:11). [9]ಅಕ್ಷರಶ "ನೀವು" ಅದನ್ನು ತಳ್ಳಿಬಿಟ್ಟದ್ದರಿಂದ. [10]ವಿಲಿಯಂ ಬಾರ್‌ಕ್ಲೆ.

[11]ಈ ವ್ಯಾಖ್ಯಾನವನ್ನು, "ನಂಬಿದವರೆಲ್ಲರೂ ನಿತ್ಯಜೀವಕ್ಕೆ ನೇಮಕಗೊಂಡರು" ಎಂಬುದಾಗಿ ತರ್ಜುಮೆ ಮಾಡಲಾಗಿದೆ. [12]ಸ್ತ್ರೀಯರ ಶಕ್ತಿ ಮತ್ತು ವರ್ಚಸ್ಸಿನ ಬಗ್ಗೆ ಲೂಕನು ಸಕಾರಾತ್ಮಕವಾಗಿಯೂ ಮತ್ತು ನಕರಾತ್ಮಕ ವಾಗಿಯೂ ಹೆಚ್ಚಾಗಿ ಹೇಳಲು ಸಾಧ್ಯವಿತ್ತು. [13]ಯೆಹೂದ್ಯ ಮತವು ಒಪ್ಪಿಕೊಂಡ ಧರ್ಮವಾಗಿತ್ತು ಆದರೆ ಕ್ರೈಸ್ತತ್ವವನ್ನು ಒಪ್ಪಿಕೊಳ್ಳಲು ಅಥವಾ ಒಪ್ಪದೆಯಿರಲು ರೋಮಾಯರು ಯಾವ ವಿಧವಾದ ನಿರ್ಣಯನ್ನು ಮಾಡಿರಲಿಲ್ಲ. [14]ಕ್ರೈಸ್ತರ ನಾಯಕತ್ವವನ್ನು ದೃಢೀಕರಿಸಲು ಪೌಲನು ಹಸ್ತಾರ್ಪಣೆ ಮಾಡುತ್ತಿದ್ದನು, "ಪರಿಶುದ್ಧಾತ್ಮಭರಿತರಾಗಿ" ಅವರು ಅದ್ಭುತಗಳನ್ನು ಮಾಡಲು ಸಾಧ್ಯವಿತ್ತು. ಮತ್ತು ಈ ಕ್ರೈಸ್ತರು ಪರಿತ್ರಾತ್ಮನಿಂದುಂಟಾಗುವ ಫಲಗಳಾದ ಪ್ರೀತಿ, ಸಮಾಧಾನ, ಧೀರ್ಘಶಾಂತಿ ಇವುಗಳಲ್ಲಿ ಆನಂದಿಸಿದ್ದರು (ಗಲಾತ್ಯ 5:22, 23). [15]"ಇಕೋನ್ಯ" ಎಂಬ ಹೆಸರು ಗ್ರೀಕ್ ಪದದ ಸಾರೂಪ್ಯ ಮೂಲ ಪದದಿಂದ ಬಂದಿರುತ್ತದೆ (ಆಂಗ್ಲ ಭಾಷೆಯಲ್ಲಿ ಅದನ್ನು "ಐಕಾನ" ಎಂದು ಕರೆಯುವರು). ಗ್ರೀಕರ ನಂಬಿಕೆಯ ಪ್ರಕಾರ ಮಣ್ಣಿನ ವಿಗ್ರಹಗಳು ಇಕೋನ್ಯದಲ್ಲಿ ಮರುಜೀವಹೊಂದಿ ಪ್ರಪಂಚದಲ್ಲಿ ವಂಶಾಭಿವೃದ್ಧಿಗೊಂಡ ವು ಎಂಬುದಾಗಿರುತ್ತದೆ. "ಜಲಪ್ರಳಯದ ನಂತರ" ಉಂಟಾಗಿತ್ತೆಂಬ ನಂಬಿಕೆ. [16]ಗ್ರೀಕ್ ಭಾಷೆಯನ್ನು ಮಾತನಾಡುತ್ತಿದ್ದ ಅನ್ಯರಿಗೆ ಗ್ರೀಕರೆಂದು ಕರೆದಿರಬಹುದು. [17]"ಹಿಂಬಾಲಿಸಲು ನಿರಾಕರಿಸಿದವರು" ಎಂಬ ಗ್ರೀಕ್ ಮೂಲದ ಪದವಾಗಿರುತ್ತದೆ. ಅಥವಾ ವಿಧೇಯತೆಗೆ ಒಳಗಾಗದವರು. [18]ಯೋಹಾನನ 3:36ನ್ನು ನಂಬಿಕೆ ಮತ್ತು ವಿಧೇಯತೆಗೆ ಬಳಸಲಾಗಿದೆ. (KJV ಯಲ್ಲಿರುವದಿಲ್ಲ) "ನಂಬಿಕೆ" ಎಂಬ ಪದದಲ್ಲಿ ದೇವರಿಗೆ ತೋರ್ಪಡಿಸುವ ಪ್ರತಿಕ್ರಿಯೆಗಳು ಒಳಗೊಂಡಿರುತ್ತವೆ. [19]"ಬಹಳಕಾಲ" ಎಂಬುದು ಎಷ್ಟು ಕಾಲ ಎಂದು ಅರಿಯದಿದ್ದರೂ ಕೆಲವು ತಿಂಗಳುಗಳಾಗಿ ರಬಹುದು. [20]ಲೂಕನು "ಅಪೊಸ್ತಲರು" ಎಂಬ ವಿಶೇಷ ಪದವನ್ನು ಬಳಸಿರುವನು.

[21]ಲೂಕನಾಯ ಎಂಬುದು ಗಲಾತ್ಯ ಪ್ರಾಂತ್ಯದ ಒಂದು ಜಿಲ್ಲೆ.